# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 331 (357) |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16-02-2023. |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಮತ್ತು ಸಿಬ್ಬಂದಿಗಳಿಗೆ ವಯಕ್ತಿಕ ವಿಮಾ ಸೌಲಭ್ಯವನ್ನು ಜಾರಿಗೆ ತರಲು ಸರ್ಕಾರವು ಯೋಜನೆಯನ್ನು ರೂಪಿಸುತ್ತಿದೆಯೇ; | ಇಲ್ಲ |
| (ಆ) | ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| (ಇ) | ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ವಿಮಾ ಸೌಲಭ್ಯವನ್ನು ದೊರಕಿಸಿಕೊಡಲು ಸರ್ಕಾರ ಯಾವ ರೀತಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಹಾಗೂ ಅವರಿಗೆ ಈ ವಿಮಾ ಸೌಲಭ್ಯದಿಂದ ಆಗುವ ಅನುಕೂಲಗಳೇನು; (ವಿವರ ಒದಗಿಸುವುದು). | |
| (ಈ) | ಗ್ರಾಮ ಪಂಚಾಯಿತಿ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ನೀಡುವ ಸೌಲಭ್ಯವನ್ನು ಕಲ್ಪಿಸಿಕೊಡುವ ಕುರಿತು ಸರ್ಕಾರದ ನಿಲುವೇನು; | ಗ್ರಾಮ ಪಂಚಾಯತಿ ಸದಸ್ಯರುಗಳು ಗ್ರಾಮ ಪಂಚಾಯತಿ ಕೆಲಸಗಳ ನಿಮಿತ್ತ ಗ್ರಾಮ ಪಂಚಾಯತಿ ಪರಿಮಿತಿಗಳಾಚೆ ಮಾಡಿದ ಪ್ರಯಣಗಳಿಗಾಗಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ) ನಿಯಮಗಳು, 1994ರನ್ವಯ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆ ಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| (ಉ) | ರಾಜ್ಯದಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಹಾಲಿ ಒದಗಿಸುತ್ತಿರುವ ಅನುದಾನವು ಕಡಿಮೆಯಾಗಿದ್ದು, ಇದರಿಂದ ಅಭಿವೃದ್ಧಿ ಕಾಮಗಾರಿಗಳ ಜೊತೆಗೆ ಗ್ರಾಮ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸಕ್ಕೆ ಅತ್ಯಧಿಕ ಹಣವು ಖರ್ಚಾಗುತ್ತಿರುವುದರಿಂದ ಸರ್ಕಾರವು ಅನುದಾನವನ್ನು ಹೆಚ್ಚಿಸುವ ಬಗ್ಗೆ ಆಲೋಚಿಸಿದೆಯೇ? (ವಿವರ ನೀಡುವುದು) | ಪ್ರಸ್ತುತ ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: ಗ್ರಾಅಪಂರಾ 54 ಜಿಪಸ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಭಾಗ–IV, ಸೆಕ್ಷನ್ 2–ಸಿ(i)ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಪ್ರಕರಣ 45ರ (2)ರ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಚಿಸಲು ಪ್ರಸ್ತಾವಿಸಿರುವ ಈ ನಿಯಮಗಳ ಕರಡನ್ನು ಸದರಿ ಅಧಿನಿಯಮದ ಪ್ರಕರಣ 311ರ ಉಪ–ಪ್ರಕರಣ (1)ರ ಮೇರೆಗೆ ಅಗತ್ಯಪಡಿಸಿದಂತೆ, ಪ್ರಕಟಿಸಿದ್ದು ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪ್ರಕಟಗೊಳಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ತಿಳಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ಗೆಜೆಟ್ ಸಾರ್ವಜನಿಕರಿಗೆ ದಿನಾಂಕ 23ನೇ ಸೆಪ್ಟೆಂಬರ್, 1994ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದೇ ಇರುವುದರಿಂದ;

ಈಗ 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ (1993ರ ಕರ್ನಾಟಕ ಅಧಿನಿಯಮ 14) 311ನೇ ಪ್ರಕರಣದೊಂದಿಗೆ ಓದಲಾದಂತೆ ಪ್ರಕರಣ 46ರ ಉಪ–ಪ್ರಕರಣ (2)ರ ಮೇರೆಗೆ ಪ್ರಧಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ನಿಯಮಗಳನ್ನು ರಚಿಸುತ್ತದೆ, ಎಂದರೆ.–

**1. ಹೆಸರು ಮತ್ತು ಪ್ರಾರಂಭ.**–(1) ಈ ನಿಯಮಗಳನ್ನು **ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರುಗಳ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ) ನಿಯಮಗಳು, 1994** ಎಂದು ಕರೆಯತಕ್ಕದ್ದು.

(2) ಇವು ಕೂಡಲೇ ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು.**–ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಕ) **'ಅಧಿನಿಯಮ'** ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (ಕರ್ನಾಟಕ ಅಧಿನಿಯಮ 1993ರ 14);

(ಖ) **'ಸದಸ್ಯ'** ಎಂದರೆ, ಗ್ರಾಮ ಪಂಚಾಯಿತಿಯ ಸದಸ್ಯ;

(ಗ) **'ಪ್ರಕರಣ'** ಎಂದರೆ, ಅಧಿನಿಯಮದ ಪ್ರಕರಣ;

(ಘ) **'ಗ್ರಾಮ ಪಂಚಾಯಿತಿ ಕೆಲಸ'** ಎಂದರೆ.–

(i) ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ಪರಿಮಿತಿಗಳ ಹೊರಗೆ ಅವನ ಪದಕ್ಕೆ ಸಂಬಂಧಪಟ್ಟ ಯಾವುದೇ ಕೆಲಸ; ಮತ್ತು

(ii) ಒಬ್ಬ ಸದಸ್ಯನಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯ ಪರಿಮಿತಿಯೊಳಗೆ ಆಗಲಿ ಅಥವಾ ಪರಿಮಿತಿಗಳ ಹೊರಗಾಗಲಿ ಅವನ ಪದಕ್ಕೆ ಸಂಬಂಧಪಟ್ಟ ಯಾವುದೇ ಕೆಲಸ.

**3. ಪ್ರಯಾಣ ಮತ್ತು ದಿನಭತ್ಯೆಯ ವಿವರ.**–ಅಧ್ಯಕ್ಷ, ಉಪಾಧ್ಯಕ್ಷರ ಅಥವಾ ಸದಸ್ಯನಿಗೆ ಸಂದರ್ಭಾನುಸಾರ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯನಾಗಿ ಅವನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ, ಗ್ರಾಮ ಪಂಚಾಯಿತಿ ಪರಿಮಿತಿಗಳಾಚೆ ಅವನು ಮಾಡಿದ ಪ್ರಯಾಣಗಳಿಗಾಗಿ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಈ ಕೆಳಕಂಡ ದರಗಳಲ್ಲಿ ಸಂದಾಯ ಮಾಡತಕ್ಕದ್ದು.–



Scanned with CamScanner

| | | |
|---|---|---|
| (i) | ರೈಲ್ವೆ ಸ್ಥಳಾವಕಾಶ | ಮೊದಲನೆ ದರ್ಜೆ |
| (ii) | ರೈಲ್ವೆ ಪ್ರಯಾಣಕ್ಕೆ ಪ್ರಾಸಂಗಿಕ ವೆಚ್ಚಗಳು | ಪ್ರತಿ 24 ಗಂಟೆಗಳ ಪ್ರಯಾಣಕ್ಕೆ ಪ್ರಾಸಂಗಿಕ ವೆಚ್ಚದ ದರ 14 ರೂಪಾಯಿಗಳು. ಪ್ರಯಾಣದ ಅವಧಿಯು 24 ಗಂಟೆಗಳ ಒಂದು ಭಾಗಾಂಶವಾಗಿರುವಲ್ಲಿ ಅಥವಾ 24 ಗಂಟೆಗಳನ್ನು ಮೀರಿದ, ಆದರೆ 24ರ ಗುಣಕವಾಗಿರದ ಗಂಟೆಗಳಿಗೆ ಸಂದಾಯ ಮಾಡುವ ಪ್ರಾಸಂಗಿಕ ವೆಚ್ಚಗಳು ಈ ಕೆಳಕಂಡಂತಿರತಕ್ಕದ್ದು:<br>(ಕ) ಆರು ಗಂಟೆಗಳನ್ನು ಮೀರದ ಪ್ರಯಾಣಕ್ಕೆ ಪ್ರಾಸಂಗಿಕ ವೆಚ್ಚದ ಶೇಕಡ 25;<br>(ಖ) ಆರು ಗಂಟೆಗಳನ್ನು ಮೀರಿದ, ಆದರೆ 12 ಗಂಟೆಗಳಿಗೆ ಮೀರದ ಪ್ರಯಾಣಕ್ಕೆ ಪ್ರಾಸಂಗಿಕ ವೆಚ್ಚ ದರದ ಶೇಕಡಾ 50;<br>(ಗ) 12 ಗಂಟೆಗಳಿಗೆ ಮೀರಿದ ಪ್ರಯಾಣಕ್ಕೆ ಪೂರ್ಣ ಪ್ರಾಸಂಗಿಕ ವೆಚ್ಚಗಳು. |
| (iii) | ಬಸ್ಸುಗಳು ಅಥವಾ ಸಾರ್ವಜನಿಕ ವಾಹನಗಳ ಸಾರಿಗೆ ವ್ಯವಸ್ಥೆ ಇರದ ಸ್ಥಳಗಳಿಗೆ ರಸ್ತೆಯ ಮೂಲಕ ಪ್ರಯಾಣಕ್ಕೆ | ಪ್ರತಿ ಕಿಲೋಮೀಟರಿಗೆ 40 ಪೈಸೆ. |
| (iv) | ರಾಜ್ಯದೊಳಗೆ ತಂಗುವಿಕೆಗಳಿಗೆ ದಿನಭತ್ಯೆ | (ಕ) ಬೆಂಗಳೂರಿನಲ್ಲಿ ತಂಗಲು ಪ್ರತಿ ದಿವಸಕ್ಕೆ 35 ರೂಪಾಯಿ;<br>(ಖ) ಇತರ ಸ್ಥಳಗಳಲ್ಲಿ ತಂಗಲು ಪ್ರತಿ ದಿವಸಕ್ಕೆ 25 ರೂಪಾಯಿ. |
| (v) | ಬಸ್ ಪ್ರಯಾಣ ಭತ್ಯೆ | ಒಂದೇ ಬಸ್ (ಹಾಸಲು) ಮತ್ತು ರೈಲು ಪ್ರಯಾಣಕ್ಕೆ ಅನ್ವಯವಾಗುವ ದರದಲ್ಲಿ ಪ್ರಾಸಂಗಿಕ ವೆಚ್ಚಗಳು. |

4. ಅತಿ ಕಡಿಮೆ ಹಾಗೂ ಅತ್ಯಂತ ಅಗ್ಗದ ಪ್ರಯಾಣ ಮಾರ್ಗವನ್ನು ಉಪಯೋಗಿಸಬೇಕು.–ಪ್ರಯಾಣ ಭತ್ಯೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಎರಡು ಸ್ಥಳಗಳ ನಡುವಿನ ಪ್ರಯಾಣವನ್ನು ಲಭ್ಯವಿರುವ ಕಡಿಮೆ ದೂರದ ಹಾಗೂ ಅತ್ಯಂತ ಅಗ್ಗದ ದರದ ಪ್ರಯಾಣ ಮಾರ್ಗದ ಮೂಲಕ ಮಾಡಬೇಕೆಂದು ಗ್ರಹಿಸತಕ್ಕದ್ದು:

ಪರಂತು ದೀರ್ಘ ಮಾರ್ಗದ ಮೂಲಕವಾದ ಪ್ರಯಾಣವು ಕಡಿಮೆ ಖರ್ಚಿನದಾದರೆ ಈ ನಿಯಮದ ಉದ್ದೇಶಕ್ಕಾಗಿ ಅತೀ ಅಗ್ಗದ ಪ್ರಯಾಣ ಮಾರ್ಗವನ್ನು ಅತ್ಯಂತ ಕಡಿಮೆ ದೂರದ ಮಾರ್ಗವೆಂದು ಭಾವಿಸತಕ್ಕದು.

5. ರೈಲು ಪ್ರಯಾಣದ ಸಂದರ್ಭದಲ್ಲಿ ಪ್ರಮಾಣ ಪತ್ರ.–ಪ್ರಯಾಣ ಭತ್ಯೆಯನ್ನು ಕ್ಲೇಮು ಮಾಡುವ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯರು, ರೈಲಿನ ಯಾವ ದರ್ಜೆಯ ದರವನ್ನು ಕ್ಲೇಮು ಮಾಡಿರುವನೋ ಆ ದರ್ಜೆಯಲ್ಲಿ ಪ್ರಯಾಣ ಮಾಡಿದ ಬಗ್ಗೆ ಪ್ರಮಾಣ ಪತ್ರವನ್ನು ಅವನ ಪ್ರಯಾಣ ಭತ್ಯದ ಬಿಲ್ಲಿನಲ್ಲಿ ದಾಖಲು ಮಾಡತಕ್ಕುದು: